ನಂತರ ಮನೆಯಲ್ಲಿ ಯಾವ ದೇವತಾ ಕಾರ್ಯವೂ ನಡೆದಿಲ್ಲ. ಒಂದು ಸತ್ಯನಾರಾಯಣ ಪೂಜೆ, ಹತ್ತಿರದ ಆಪ್ತರಿಗೆ ಹೋಳಿಗೆಯೂಟ, ಇದು ಹಳ್ಳಿಯಲ್ಲಿ ಹುಟ್ಟಿ ಬೆಳೆದು ಬಾಳಿದವರ ಇಂಗಿತ. ಪ್ರಸನ್ನನಿಗೆ ಇಬ್ಬಂದಿ. 'ಹೋಟೆಲಿನಲ್ಲಿ ಪಾರ್ಟಿ ಅಂತ ಆಸೆ ಪಡ್ತಿದಾಳೆ ಸವಿತಾ' ಅಂದಿದ್ದ. ಶಿವರಾಮನಿಗೆ ಸಿಟ್ಟು ಬಂದಿತ್ತು.

'ಅವಳು ಹೇಳಿದ್ದೇ ಆಗ್ಬೇಕು ಅಂತ ರೂಲ್ಸು ಇದೆಯೇನೋ? ಪಾರ್ಟಿ ಬೇಕಾರೆ ಇನ್ನೊಂದಿನ ಇಟ್ಕೊಳಿ. ಮೊದಲು ಮನೇಲಿ ಒಂದು ಸತ್ಯನಾರಾಯಣ ಆಗ್ಲಿ...'

'ಎರಡೆರಡು ಕಡೆ ಖರ್ಚು...' ರಾಗ ಎಳೆದಿದ್ದ ಪ್ರಸನ್ನ.

'ಮನೇಲಿ ನಡೆಯೋದರ ಖರ್ಚು ನಾನು ಕೊಡ್ತೀನಿ. ಬಡ್ಡಿ ದುಡ್ಡು ಇದೆ ನನ್ಹತ್ರ...'

'ನಿಂಗೆ ಹೇಗೆ ಹೇಳ್ಬೇಕೂಂತ ಗೊತ್ತಾಗ್ತಿಲ್ಲ ಅಪ್ಪ. ನೀನು ಅರ್ಥ ಮಾಡ್ಕಂಬೇಕು. ಅವಳ ಅಪ್ಪನ ಮನೆಗೂ, ನಮ್ಮನೆಗೂ ಇದು ಮೊದಲನೇ ಮಗು. ಅಲ್ಲಿ ಒಂದಿನ ಹುಟ್ಟುಹಬ್ಬ ಮಾಡ್ತಾರಂತೆ. ಅವರ ನೆಂಟ್ರನ್ನ, ಫ್ರೆಂಡ್ಸನ್ನ ಕರೀತಾರಂತೆ. ಮೂರು ಮೂರು ಕಡೆ ಬೇಕಾ?'

'ಹೋಟೆಲಿನಲ್ಲಿ ಎಂತಾ ಹುಟ್ಟಿದ ಹಬ್ಬಾನೋ? ಬಿಟ್ಹಾಕಿ ಅದನ್ನ'

'ಅದ್ಹೆಂಗಾಗುತ್ತೆ ಅಪ್ಪಾ? ಈಗಾಗ್ಲೇ ಹಾಲ್ ಬುಕ್ ಮಾಡಿದ್ದಾಗಿದೆ. ಅವಳ ಫ್ರೆಂಡ್ಸಿಗೆಲ್ಲಾ ಹೇಳಿಟ್ಟಿದಾಳೆ...'

'ಒಂದು ಗಾದೆ ಉಂಟು ಗೊತ್ತಾ?'

'.'

'ಮಾಡೋರೊಬ್ರಿದ್ರೆ ನೋಡು ನನ್ನ ಸಿರಿ ಅಂತ. ದುಡ್ಡು ಖರ್ಚು ಮಾಡೋ ಎಲ್ಲಾ ವಿದ್ಯೇನೂ ನಿನ್ನ ಹೆಂಡ್ತಿಗೆ ಗೊತ್ತಿದೆ. ಕಾಲಲ್ಲಿ ನಡೀಬೇಕೇ ವಿನಾ ತಲೇಲಿ ನಡೀಬಾರ್ದು...'

'ಪ್ಲೀಸ್ ಅಪ್ಪಾ, ಏನೇನೋ ಹೇಳ್ಬೇಡಿ. ಅವಳ ಕಿವಿಗೆ ಬಿದ್ರೆ ಕಷ್ಟ. ನಾವೇನು ದಿನಾ ಹುಟ್ಟಿದ ಹಬ್ಬ ಮಾಡ್ತೀವಾ? ಮೊದಲನೇ ವರ್ಷ. ಇದೊಂದು ಸಲ'

ಮತ್ತೆ ಮಾತಾಡಲಿಲ್ಲ ಶಿವರಾಮ. ಐವತ್ತರವತ್ತು ಜನಕ್ಕೆ ಸ್ಟಾರ್ ಹೋಟೆಲಿನಲ್ಲಿ ಪಾರ್ಟಿ ಅಂದರೆ ಲಕ್ಷಗಟ್ಟಲೆಯ ವ್ಯಾಪಾರ. 'ಇವಳು ಒಂದಿನ ಮೂರು ದಾರಿ ಕೂಡೋ ಜಾಗದಲ್ಲಿ ನಿನ್ನ ಮಗನ್ನ ಹರಾಜು ಹಾಕ್ತಾಳೆ' – ಹೆಂಡತಿಯೊಡನೆ ಗುಟ್ಟಿನಲ್ಲಿ ತನ್ನ ಅಸಮಾಧಾನ ವ್ಯಕ್ತಪಡಿಸಿದ್ದ ಶಿವರಾಮ.

'ಅದಕ್ಕೇನಂತೆ? ನೀವೇ ಕೊಂಡ್ಕಳ್ಳಿ...' ಅಂದಿದ್ದಳು ಸೀತಾಲಕ್ಷ್ಮಿ, ಕುಶಾಲಿನಿಂದ. ಗಂಡನ ಹತ್ತಿರ ಇರುವ ಇಪ್ಪತ್ತು ಲಕ್ಷದ ಇಡುಗಂಟು ಅಂದರೆ ಭಾರೀ ದೊಡ್ಡ ಮೊತ್ತ ಎನ್ನುವ ಭ್ರಮೆ ಅವಳಿಗೆ. ಗಂಡನ ತಂಬಾಕಿನ ಹುಚ್ಚು, ಆಗೀಗ ತರಕಾರಿ, ಹಣ್ಣು ಎಂದು ಮನೆಗೆ ಖರ್ಚು ಮಾಡುತ್ತಿದ್ದ ದುಡ್ಡನ್ನು ಕಳೆದರೂ ಬಡ್ಡಿ ಒಟ್ಟಾಗಿ ಗಂಟು ಬೆಳೆಯುತ್ತಿರುತ್ತದೆ ಎನ್ನುವ ಅಂದಾಜು. 'ಕೈಲಿ ದುಡ್ಡಿದೆ ಅಂದ್ರೆ ಯಾರೂ ಬಿಟ್ಟು ಹಾಕುವುದಿಲ್ಲ. ದುಡ್ಡಿನ ಆಸೆಗಾದರೂ ಜೋಪಾನ ಮಾಡುತ್ತಾರೆ' ಎನ್ನುವ ನಂಬಿಕೆ.

ಶಿವರಾಮ, ಸೀತಾಲಕ್ಷ್ಮಿಯನ್ನು ಹೋಟೆಲಿನಲ್ಲಿ ಆಯೋಜಿಸಿದ ಭರ್ಜರಿ ಪಾರ್ಟಿಗೆ ಕರೆದುಕೊಂಡು ಹೋಗಿದ್ದರು ಮಗ, ಸೊಸೆ. ಮಗನ ಆಫೀಸಿನವರು, ಸೊಸೆಯ ಸ್ನೇಹಿತೆಯರು ಎಂದು ಅಲ್ಲಿಗೆ ಬಂದಿದ್ದ ಜನರ ನಡುವೆ ಕಣ್ಣು ಕಟ್ಟಿ ಕಾಡಿನಲ್ಲಿ ಬಿಟ್ಟಂತಾಗಿದ್ದರು ದಂಪತಿ. ಮೋಂಬತ್ತಿ ಆರಿಸುವುದು, ಕೇಕ್ ಕತ್ತರಿಸುವುದು, ಒಟ್ಟೊಟ್ಟಿಗೆ ಇಂಗ್ಲಿಷಿನಲ್ಲಿ ಶುಭಾಶಯ ಕೋರುವುದು, ಇಂಥವೆಲ್ಲಾ ಅವರಿಗೆ ನೋಡಿಯೇ ಗೊತ್ತಿಲ್ಲ. ಟೀವಿ ಧಾರಾವಾಹಿಗಳಲ್ಲಿ ನೋಡಿದ್ದೆಷ್ಟೋ ಅಷ್ಟೇ. ಊಟದ ಹೊತ್ತಿಗೆ ಮತ್ತಷ್ಟು ಫಜೀತಿ. 'ಯಾರು ಏನಾರೂ ಅಂದ್ಕಳ್ಲಿ' ಎನ್ನುತ್ತಾ ಶಿವರಾಮ ಚಮಚ ಬದಿಗಿಟ್ಟು ದೇವರು ಕೊಟ್ಟ ಕೈ ಉಪಯೋಗಿಸಿದ. ಸೀತಾಲಕ್ಷ್ಮಿ ಗಂಡನನ್ನು ಅನುಸರಿಸಿದಳು. ತಾವಿಬ್ಬರೂ ಅಂತಲ್ಲಿಗೆ ಸಲ್ಲದ ಬೇರೆ ಲೋಕದವರಂತೆ ಕಾಣುತ್ತಿದ್ದೇವೆ ಎಂದು ಅವಳಿಗೆ ಅಲ್ಲಿಗೆ ಬಂದಾಗಿನಿಂದ ಅನಿಸುತ್ತಿತ್ತು. ಅಂತೂ ಇಂತೂ ದಂಪತಿಯ ಬದುಕಿನ ಮೊಟ್ಟಮೊದಲ ಹಾಗೂ ಕಟ್ಟಕಡೆಯ ತಾರಾ ಹೋಟೆಲಿನ ಸಮಾರಂಭ ಮುಗಿಯಿತು. ಮನೆಯೊಳಗೆ ಕಾಲಿಡುತ್ತಿದ್ದಂತೆ ನಿರಾಳನಾಗಿ ಹೇಳಿದ ಶಿವರಾಮ,

'ಅಯ್ಯಬ್ಬಾ, ಇನ್ಮ್ಯಾವತ್ತೂ ಇಂಥ ಕಡೆ ನಮ್ಮನ್ನ ಕರ್ಕೊಂಡು ಹೋಗ್ಬೇಡಿ. ಉಸಿರು ಕಟ್ಟುತ್ತೆ ನಮಗೆ. ಪಾರ್ಟಿ ಅಂದ್ರೆ ಹಿಂಗಿರುತ್ತೆ ಅಂತ ನಮಗೆ ಗೊತ್ತಿದ್ರೆ ನಾವು ಬರ್ತಾನೇ ಇರ್ಲಿಲ್ಲ...'

'ಇಂಥಾದ್ದೆಲ್ಲಾ ಒಂದ್ಸಲಾನಾದ್ರೂ ಅನುಭವ ಆಗ್ಬೇಕು ಮಾವ...' ಅಂದಿದ್ದಳು ಸೊಸೆ, ಅದ್ದೂರಿಯಾಗಿ ಹುಟ್ಟುಹಬ್ಬ ನಡೆಸಿದ ಸಂಭ್ರಮದಲ್ಲಿ.

***

ಹುಟ್ಟುಹಬ್ಬದ ಶುಭ ಸಂದರ್ಭದಲ್ಲಿ ಮೊಮ್ಮಗನ ಕುತ್ತಿಗೆಗೆ ಒಂದು ಚಿನ್ನದ ಚೈನು ತೊಡಿಸಿ ಚಂದ ನೋಡಬೇಕೆಂದು ಸೀತಾಲಕ್ಷ್ಮಿಗೆ ಕುತ್ತಿಗೆಯವರೆಗೆ ಆಸೆ ಇತ್ತು. ಹೊಸದಾಗಿ ಕೊಂಡುಕೊಂಡು ಬರಬೇಕಾದ್ದೇನಿಲ್ಲ. ಇದ್ದಿದ್ದರಲ್ಲೇ ಒಂದನ್ನು ತೊಡಿಸುವುದು. ಆ ಒಂದನ್ನು ಆ ಇದ್ದಿದ್ದನ್ನು ತೊಡಿಸಬೇಕಾದರೆ ಲಾಕರಿನಿಂದ ತೆಗೆದುಕೊಂಡು ಬರಬೇಕು. ಸೊಸೆಯ ತೌರಿನಲ್ಲಿ ಮದುವೆಯ ಹೊತ್ತಿಗೆ ಏನೆಲ್ಲಾ ಚಿನ್ನ ಹಾಕಿದ್ದಾರೆಂದು ಸೀತಾಲಕ್ಷ್ಮಿಗೆ ಇವತ್ತಿಗೂ ಗೊತ್ತಿಲ್ಲ. ಅವಳಿಗೆ ತಮ್ಮ ಹಳ್ಳಿಮನೆಗಳ ಮದುವೆಗಳ ಸಂಭ್ರಮ ನೆನಪಾಗುತ್ತಿತ್ತು. ಮದುವಣಗಿತ್ತಿಗೆ ಏನೇನು ಒಡವೆ ಹಾಕಿದ್ದಾರೆಂದು ಕೊರಳ ಸರಗಳನ್ನು, ಕೈಯ ಬಳೆಗಳನ್ನು ಸನಿಹದಿಂದ ಗಮನಿಸುತ್ತಾ, ಮುಟ್ಟಿ ನೋಡುತ್ತಾ, ಮೆಚ್ಚುಗೆಯ ಮಾತಾಡುತ್ತಾ 'ಅಪ್ಪನ ಮನೇಲಿ ಇಷ್ಟು ಚಿನ್ನ ಹಾಕಿದಾರಂತೆ' ಎನ್ನುವ ಸುದ್ದಿ ಹೆಂಗಳೆಯರ ನಾಲಿಗೆಯ ಮೇಲೆ ನಲಿಯುತ್ತಿತ್ತು. ಮದುವೆಯಾಗಿ ವಾರ ಕಳೆಯುವುದರೊಳಗೆ ಸವಿತಾ ಎಲ್ಲವನ್ನೂ ಲಾಕರಿನಲ್ಲಿಟ್ಟು ಬಂದಿದ್ದಳು. ಲಾಕರಿನ ಕೀಯನ್ನು ಪ್ರಸನ್ನ ಹೆಂಡತಿಗೆ ವರ್ಗಾಯಿಸಿದ್ದ. ಈಗ ಮೊಮ್ಮಗನಿಗೆ ಒಂದು ಸರ ಹಾಕಬೇಕೆಂದರೆ ಸೊಸೆಯನ್ನು ಕೇಳಬೇಕು. ಎಲ್ಲವನ್ನೂ ಟ್ರೆಜರಿಯಲ್ಲಿಟ್ಟುಕೊಂಡು ಜೋಪಾನ ಮಾಡುತ್ತಿದ್ದ ಯಜಮಾನಿಕೆಯ ದಿನಗಳು ನೆನಪಾಗಿದ್ದುವು ಶಿವರಾಮನಿಗೆ. ವಿಧಿ ಇಲ್ಲದೆ ಸೊಸೆಗೆ ಹೇಳಿದ್ದ,

'ನಿಂಗೆ ಯಾವುದು ಖಾಯಿಷ್ ಆಗುತ್ತೋ ಅದನ್ನ ತಂದ್ಕೊಡು. ಮಗು ಕುತ್ತಿಗೆಗೆ ಹಾಕ್ತೀವಿ. ನಿನ್ನ ಅತ್ತೆಗೆ ಏನೋ ಆಸೆ...'

ಹೂಂಗುಟ್ಟಿದ್ದಳೇ ವಿನಾ ಸವಿತಾ ಅದನ್ನು ಕಾರ್ಯರೂಪಕ್ಕೆ ತಂದಿರಲಿಲ್ಲ. ಪದೇ ಪದೇ ಕೇಳಲು ಶಿವರಾಮನಿಗೆ ಹೀನಾಯ. ಕೊನೆಗೂ ಅವರ ಆಸೆ ಈಡೇರಲಿಲ್ಲ. ಅಷ್ಟೆಲ್ಲಾ ಚಿನ್ನ ಇಟ್ಟುಕೊಂಡು ಬೀಗಿದವರಿಗೆ ಮೊಮ್ಮಗನ ಕುತ್ತಿಗೆಗೆ ಒಂದು ಸರ ತೊಡಿಸುವ ಯೋಗ ಕೂಡಿ ಬರಲಿಲ್ಲ.

'ಸರ ತರಲ್ಲನೇ? ಹೇಳ್ಲಿಲ್ವಾ ಮಾವ?' ಸೀತಾಲಕ್ಷ್ಮಿ ಬಾಯ್ಬಿಟ್ಟು ಮತ್ತೊಮ್ಮೆ ನೆನಪಿಸಿದ್ದಳು.

'ಅಯ್ಯೋ ಅತ್ತೇ, ಜನ ಸೇರೋ ಜಾಗದಲ್ಲಿ ಮಗೂಗೆ ಚಿನ್ನ ಹಾಕಿ ಕರ್ಕೊಂಡ್ಹೋಗೋದಾ? ಆಮೇಲೆ ಗಮನ ಎಲ್ಲಾ ಅದರ ಮೇಲೆ ಇಟ್ಟಿರ್ಬೇಕಾಗುತ್ತೆ. ಈಗ್ಲೇ ಕೊಡಬೇಕೂಂತೇನು? ಮತ್ಯಾವತ್ತಾದ್ರೂ ಕೊಡಿ'

'ಈಗ ಬ್ಯಾಡಾಂತೀಯಾ?'

'ನೋಡೋಣ...' ಅಂದ ಸವಿತಾ ಕೊನೆಗೂ ಸರ ತಂದುಕೊಡಲಿಲ್ಲ. ಜನ ಸೇರುವ ಜಾಗದಲ್ಲಿ ಬೇಡ, ಕೊನೇಪಕ್ಷ ಮನೆಯಲ್ಲಾದರೂ ಒಂದು ದಿನ ಹಾಕಿ ಚಂದ ನೋಡಬಹುದಿತ್ತು. ಸೊಸೆ ತನ್ನ ಉಡುಪಿಗೆ ತಕ್ಕಂತೆ ತೊಡುವ ಆಭರಣಗಳಲ್ಲಿ ಅಸಲಿ ಯಾವುದು, ನಕಲಿ ಯಾವುದು ಎಂದು ಗೊತ್ತಾಗುತ್ತಿರಲಿಲ್ಲ ಸೀತಾಲಕ್ಷ್ಮಿಗೆ. ಏನೆಂದರೂ ಚಿನ್ನ ಚಿನ್ನವೇ. ಅದರ ಕಿಮ್ಮತ್ತು ಅದಕ್ಕೆ ಇದ್ದೇ ಇರುತ್ತದೆ.

ಸೊಸೆಯ ತೌರುಮನೆಯಲ್ಲಿ ಒಂದು ಭಾನುವಾರ ಇಟ್ಟುಕೊಂಡಿದ್ದ ಹುಟ್ಟುಹಬ್ಬದ ಕಾರ್ಯಕ್ರಮಕ್ಕೆ ಅತ್ತೆ, ಮಾವನನ್ನು ಕರೆದುಕೊಂಡು ಹೋಗಲು ಸವಿತಾ ಉತ್ಸುಕತೆ ತೋರಿಸಲಿಲ್ಲ.

'ಬರ್ತೀರಾದ್ರೆ ಬನ್ನಿ. ಇವತ್ತು ಅಲ್ಲೇ ಉಳ್ಕಂಬೇಕು ಅಂದ್ಕೊಂಡಿದೀವಿ ನಾವು. ನೀವು ಬರ್ತೀರಾದ್ರೆ ವಾಪಸು ಬಿಡೋಕೆ ಇವರು ಬರ್ಬೇಕಾಗುತ್ತೆ. ಮತ್ತೇನಿರಲ್ಲ ಅತ್ತೆ, ಮೊನ್ನೆ ನಡೆದ ಹಾಗೇನೇ. ಕೇಕು ಕತ್ತರಿಸೋದು, ಬಫೆ ಊಟ. ಕೂತ್ಕಂಡು ಉಣ್ಣೋಕೆ ಜಾಗ ಇರ್ಬೇಕಲ್ಲ, ನಿಮಗೆ ಅದೆಲ್ಲಾ ಸರಿಯಾಗಲ್ಲ, ಅದಕ್ಕೇ'

ಕರೆಯುವ ಕ್ರಮವೇ ಇದು ಎಂದು ಸೀತಾಲಕ್ಷ್ಮಿಯಂತಹ ಸೀತಾಲಕ್ಷ್ಮಿಗೇ ಅನಿಸಿತು.

'ಹೋಗ್ಬನ್ನಿ ನೀವು...' ಅಂದ ಶಿವರಾಮ, ಮುಗುಮ್ಮಾಗಿ.

ಗಂಡ ಹೆಂಡಿರು ಮೊಮ್ಮಗನೊಡನೆ ಹೊರಟು ಹೋದ ಮೇಲೆ ಶಿವರಾಮನ ಅಸಮಾಧಾನ ದೊಡ್ಡ ಗಂಟಲಿಂದ ಹೊರ ಬಿತ್ತು,

'ಬೀಗರಂತೆ ಬೀಗರು. ಬನ್ನಿ ಅಂತ ಒಂದು ಮಾತು ಬಾಯ್ಬಿಟ್ಟು ಕರೆದ್ರಾ? ಫೋನಲ್ಲಿ ಹೇಳಿದ್ರೂ ಸಾಕಿತ್ತು. ಇಲ್ಲಿ ಬಂದು ಹೊಟ್ಟೆಬಿರಿ ಉಂಡ್ಕಂಡು ಹೋಗಲ್ಲನೇ? ಅದರ ನೆನಪಾದ್ರೂ ಬ್ಯಾಡ್ವಾ? ಎಷ್ಟೋ ಸಲ ನನ್ನ ದುಡ್ಡಲ್ಲಿ ನಾನೇ ಸಾಮಾನು ತಂದು ಹಾಕಿದೀನಿ...'